# 10ನೇ ತರಗತಿ ಕನ್ನಡ ರಸಪ್ರಶ್ನೆ - 03. ಶಬರಿ [ಗದ್ಯ] ದಿನಾಂಕ 19-07-2019

1. ಮತಂಗಾಶ್ರಮ ದಲ್ಲಿ ವಾಸವಿದ್ದ ತಪಸ್ವಿನಿ ಯಾರು?

ಉತ್ತರ:- ಶಬರಿ

2. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ಉತ್ತರ:- ಧನು / ಕಬಂಧ / ಉದರಮುಖ [ ಇವುಗಳಲ್ಲಿ ಯಾವುದಾದರೂ ಒಂದು]

3. ಶ್ರೀರಾಮನ ತಂದೆಯ ಹೆಸರೇನು?

ಉತ್ತರ:- ದಶರಥ

4. ಅರ್ತಿ ; ಪ್ರೀತಿ : ; ಸುರಭಿ ; ..........................

ಉತ್ತರ:- ಕಾಮಧೇನು

5. ಪುತಿನ ರವರು ಎಷ್ಟರಲ್ಲಿ , ಎಲ್ಲಿ ಜನಿಸಿದರು?

ಉತ್ತರ:- ಕ್ರಿ.ಶ. 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆ

6. ಪುತಿನರವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕೃತಿ ಯಾವುದು?

ಉತ್ತರ:- 'ಹಂಸ ದಮಯಂತಿ ಮತ್ತು ಇತರ ರೂಪಕಗಳು'

7. ' ಮತಂಗಾಶ್ರಮ' ಪದದಲ್ಲಿರುವ ಸಂಧಿ ಹೆಸರು ಏನು?

ಉತ್ತರ:- ಸವರ್ಣದೀರ್ಘ ಸಂಧಿ

8. 'ರೂಪಕೂ ನಾಮ ಮಿಗಿಲಾತ್ಮ ಸುರಭಿಯದು' - ಈ ವಾಕ್ಯದಲ್ಲಿರುವ ಅಲಂಕಾರ ಯಾವುದು?

ಉತ್ತರ:- ರೂಪಕ ಅಲಂಕಾರ

9. 'ಶಬರಿ' ಗೀತ ನಾಟಕವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ?

ಉತ್ತರ:- ಶ್ರೀರಂಗ ಮತ್ತು ನಾ ಕಸ್ತೂರಿ ಸಂಪಾದಿಸಿರುವ 'ಏಕಾಂಕ ನಾಟಕಗಳು'

10. " ಆವುದೀ ಮರುಳು ? ನಮ್ಮೆಡೆಗೆ ಬರುತಿಹುದು " ಈ ಮಾತನ್ನು ಯಾರು ಯಾರಿಗೆ ಹೇಳುತ್ತಾರೆ?

ಉತ್ತರ:- ರಾಮನು ಲಕ್ಷ್ಮಣನಿಗೆ ಹೇಳುತ್ತಾನೆ

11. ಪು.ತಿ.ನ. ರವರು ಎಷ್ಟರಲ್ಲಿ, ಎಲ್ಲಿ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು?

ಉತ್ತರ:- 1981 ರಲ್ಲಿ ಚಿಕ್ಕಮಗಳೂರು

12. ಚೀರ ; ಸೀರೆ :; ದೃಷ್ಟಿ ; ....................

ಉತ್ತರ:- ದಿಟ್ಟಿ

13. ರಾಮಲಕ್ಷ್ಮಣರು ; ದ್ವಂದ್ವ ಸಮಾಸ :; ಭೂಮಿಜಾತೆ ; ................................

ಉತ್ತರ:- ಬಹುವ್ರೀಹಿ ಸಮಾಸ

14. ಅಹಲ್ಯೆ , ಗೋಕುಲ ನಿರ್ಗಮನ , ಸಹನಾ , ರಸಸರಸ್ವತಿ - ಇವುಗಳಲ್ಲಿ ಗುಂಪಿಗೆ ಸೇರದ ಪದ ಯಾವುದು?

ಉತ್ತರ:- ಸಹನಾ

15. ವಾಗ್ದೇವಿ ; ಜಶ್ತ್ವ ಸಂಧಿ :; ಮಳೆಗಾಲ ; ....................

ಉತ್ತರ:- ಆದೇಶ ಸಂಧಿ

16. ಪುತಿನ ರವರ ಪಂಪ ಪ್ರಶಸ್ತಿ ಪಡೆದ ಕೃತಿ ಯಾವುದು?

ಉತ್ತರ:- 'ಶ್ರೀಹರಿಚರಿತೆ'

17. ಉದರಮುಖ ; ಬಹುವ್ರೀಹಿ ಸಮಾಸ :; ಹಣ್ಣುಹಂಪಲು ; ......................

ಉತ್ತರ:- ದ್ವಂದ್ವ ಸಮಾಸ

18. ಹಾಲುಜೇನು ; ಜೋಡುನುಡಿ :; ಬಟ್ಟಬಯಲು ; ......................

ಉತ್ತರ:- ದ್ವಿರುಕ್ತಿ

19. ಸನ್ಮಂಗಳ ; ಅನುನಾಸಿಕ ಸಂಧಿ : ; ಚಂದ್ರಾನನೇ ; .........................

ಉತ್ತರ:- ಸವರ್ಣದೀರ್ಘ ಸಂಧಿ

20. " ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು " ಈ ಮಾತನ್ನು ಯಾರು ಯಾರಿಗೆ ಹೇಳಿದರು?

ಉತ್ತರ:- ಶ್ರೀರಾಮನು ಲಕ್ಷ್ಮಣನಿಗೆ ಹೇಳಿದನು.